ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 18–02–2020

# ಪತ್ರಿಕಾ ಆಮಂತ್ರಣ

**೧. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜರ ಜಯಂತೋತ್ಸವ ಕಾರ್ಯಕ್ರಮ:**

**ದಿವ್ಯ ಸಾನಿಧ್ಯ**
**ಶ್ರೀ ಮಂಜುನಾಥ ಸ್ವಾಮೀಜಿ**
**ಶ್ರೀ ಗೋಸಾಯಿ ಮಹಾಸಂಸ್ಥಾನಮಠ, ಶ್ರೀ ಭವಾನಿಪೀಠ, ಬೆಂಗಳೂರು**

**ಉದ್ಘಾಟನೆ:**

**ಬಿ.ಎಸ್. ಯಡಿಯೂರಪ್ಪ,**
**ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

**ಘನ ಉಪಸ್ಥಿತಿ:**

**ಡಿ.ವಿ. ಸದಾನಂದ ಗೌಡ,**
**ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು, ಭಾರತ ಸರ್ಕಾರ**

**ಶ್ರೀಮತಿ ನಿರ್ಮಲಾ ಸೀತಾರಾಮನ್**
**ಹಣಕಾಸು ಸಚಿವರು, ಭಾರತ ಸರ್ಕಾರ**

**ಅಧ್ಯಕ್ಷತೆ:**

**ಉದಯ್ ಬಿ. ಗರುಡಾಚಾರ್,**

**ಶಾಸಕರು,**
**ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.**

**ದಿನಾಂಕ : 19–02–2020, ಬುಧವಾರ, ಸಮಯ : ಬೆಳಿಗ್ಗೆ 11–30 ಗಂಟೆಗೆ**

**ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ, ಬೆಂಗಳೂರು.**

2. **Farewell to:**

**Hon'ble Shri Justice P.G.M. Patil,**
**Judge,**
**High Court of Karnataka,**

**Farewell Address by:**
**Chairman, Karnataka State Bar Council and**
**Chief Justice, High Court of Karnataka**

**Date: 19-02-2020 Wednesday Time: 2.00 pm**

**Venue: Court Hall No. 1 of the Principal Bench of the High Court of Karnataka. Bengaluru.**

## ಸದನದಲ್ಲಿ ಇಂದು

## 15 ದಿನಗಳ ಒಳಗಾಗಿ ವೇತನ ಬಿಡುಗಡೆ

ಬೆಂಗಳೂರು ಫೆಬ್ರವರಿ 18 (ಕರ್ನಾಟಕ ವಾರ್ತೆ):

ರಾಜ್ಯ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹಾಗೂ ಖಾಸಗಿ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿಗಳಿಗೆ ಮುಂದಿನ 15 ದಿನಗಳ ಒಳಗಾಗಿ ವೇತನ ಬಿಡುಗಡೆ ಮಾಡಲು ಕ್ರಮ

ಕೈಗೊಳ್ಳುವುದಾಗಿ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವ ಡಾ. ಅಶ್ವತ್ಥ್ ನಾರಾಯಣ್ ಇಂದು ಸದನದಲ್ಲಿ ಭರವಸೆ ನೀಡಿದರು.

ವಿಧಾನ ಪರಿಷತ್ತಿನ ಕಲಾಪದಲ್ಲಿ ಸದಸ್ಯ ಎಸ್. ವಿ. ಸಂಕನೂರ ಅವರು ನಿಯಮ 330 ಎ ಅಡಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಕಳೆದ ಹಲವಾರು ತಿಂಗಳುಗಳಿಂದ ವೇತನ ಬಿಡುಗಡೆಯಾಗದೇ ಆರ್ಥಿಕ ತೊಂದರೆ ಆಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದ್ದು ಈಕುರಿತು ಕೂಡಲೆ ಕ್ರಮ ಕೈಗೊಳ್ಳಲಾಗುವುದು ಎಂದು ಸದನಕ್ಕೆ ತಿಳಿಸಿದರು.

# ನಿಲುವಳಿ ಕುರಿತು ನಾಳೆ ಚರ್ಚೆ

ಬೆಂಗಳೂರು ಫೆಬ್ರವರಿ 18 (ಕರ್ನಾಟಕ ವಾರ್ತೆ):

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಅದಗೆಟ್ಟಿದ್ದು, ಪೋಲೀಸ್ ಇಲಾಖೆ ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಂಡಿಸಿದ ನಿಲುವಳಿ ಸೂಚನೆಯನ್ನು ನಾಳೆ ಮಧ್ಯಾಹ್ನ 3 ಗಂಟೆಗೆ ಚರ್ಚೆಗೆ ಎತ್ತಿಕೊಳ್ಳುವುದಾಗಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸದನಕ್ಕೆ ತಿಳಿಸಿದರು.

ಇಂದು ಬೆಳಿಗ್ಗೆ ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಅವರು ನಿಯಮ 60 ರ ಅಡಿಯಲ್ಲಿ ಮಂಡಿಸಿದ ನಿಲುವಳಿಯ ನಂತರ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವ ಜೆ. ಮಾಧುಸ್ವಾಮಿ ಅವರು ಮಾತನಾಡಿ ವಿರೋದ ಪಕ್ಷದ ನಾಯಕರ ಈ ನಿಲುವಳಿ ನಿಯಮ 60 ರ ಅಡಿಯಲ್ಲಿ ಬರುವುದಿಲ್ಲ ಎಂದು ಅಕ್ಷೇಪ ವ್ಯಕ್ತಪಡಿಸಿದ ಕಾರಣ ಸಭಾಧ್ಯಕ್ಷರು ನಿಯಮ 69 ಕ್ಕೆ ವರ್ಗಾಯಿಸಿ ಚರ್ಚೆಯನ್ನು ನಾಳೆ ಮದ್ಯಾಹ್ನ 3 ಗಂಟೆಗೆ ನಿಗಧಿಪಡಿಸಿದರು.

ಇದರಿಂದ ಚರ್ಚೆಗೆ ಅವಕಾಶ ನೀಡಲಿಲ್ಲವೆಂದು ವಿರೋದ ವ್ಯಕ್ತಪಡಿಸಿದ ವಿರೋದ ಪಕ್ಷದ ನಾಯಕರು ಸಭಾತ್ಯಾಗ ಮಾಡುವ ಮೂಲಕ ವಿರೋದ ವ್ಯಕ್ತಪಡಿಸಿದರು.

# ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಿದ ಮುಖ್ಯಮಂತ್ರಿಗಳು

ಬೆಂಗಳೂರು ಫೆಬ್ರವರಿ 18 (ಕರ್ನಾಟಕ ವಾರ್ತೆ):

ಇತ್ತೀಚಿಗೆ ಸಚಿವರುಗಳಾಗಿ ಅಧಿಕಾರ ಸ್ವೀಕರಿಸಿದ ರಾಜ್ಯದ ನೂತನ ಸಚಿವರನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ವಿಧಾನಸಭೆಯಲ್ಲಿ ಸದನಕ್ಕೆ ಪರಿಚಯ ಮಾಡಿಕೊಟ್ಟರು.

ನೂತನ ಸಚಿವರಲ್ಲಿ ಹಲವರು ಸದನದಲ್ಲಿ ಹಾಜರಿಲ್ಲ ಹಾಗೂ ಅವರು ನಮಗೆ ಮುಂಚೆಯೆ ಪರಿಚಯವಿದ್ದಾರೆ ಎಂದು ವಿರೋದ ಪಕ್ಷದ ನಾಯಕರ ಹೇಳಿಕೆಗೆ ಸ್ಪಂದಿಸಿ ಸಭಾಧ್ಯಕ್ಷರು ನೀಡಿದ ಸೂಚನೆಯ ಮೇರೆಗೆ ಮುಖ್ಯಮಂತ್ರಿಗಳು ಸಭೆಯಲ್ಲಿ ಹಾಜರಿದ್ದ ಸಚಿವರುಗಳನ್ನು ಮಾತ್ರ ಸದನಕ್ಕೆ ಪರಿಚಯಿಸಿದರು. ಸಭೆಯಲ್ಲಿ ಹಾಜರಿಲ್ಲದ ಕೆಲವು ಸಚಿವರು ಮೇಲ್ಮನೆಯ ಕಲಾಪದಲ್ಲಿ ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಪ್ರಶ್ನೋತ್ತರಗಳಲ್ಲಿ ಭಾಗಿಯಾಗಿದ್ದರೆಂದು ಸದನಕ್ಕೆ ತಿಳಿಸಿದರು.

## ಸಾರ್ವಜನಿಕ ವಲಯದ ಮೇಲಿನ ವರದಿ ಮಂಡನೆ

ಬೆಂಗಳೂರು ಫೆಬ್ರವರಿ 18 (ಕರ್ನಾಟಕ ವಾರ್ತೆ):

ಭಾರತ ಸಂವಿಧನದ 151 (2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲಕ್ಕೆಪರಿಶೋಧಕರು ನೀಡಿರುವ 2018ರ ಮಾರ್ಚ್ ತಿಂಗಳಿಗೆ ಕೊನೆಗೊಂಡ ವರ್ಷದ ಸಾರ್ವಜನಿಕ ವಲಯದ ಮೇಲಿನ ವರದಿಯನ್ನು (2019ನೇ ವರ್ಷದ ವರದಿ ಸಂಖ್ಯೆ–5)ನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸದನದ ಮುಂದಿಟ್ಟರು.

ಇಂದು ವಿಧಾನಸಭೆಯಲ್ಲಿ ಕಲಾಪ ಆರಂಭವಾದ ತಕ್ಷಣ ಮಾತನಾಡಿದ ಮುಖ್ಯಮಂತ್ರಿಗಳು ವರದಿಯನ್ನು ಸಭೆಯ ಮುಂದಿಡುವುದಾಗಿ ತಿಳಿಸಿದರು. ನಂತರ ಸಚಿವ ಸಂಪುಟದ ಸದಸ್ಯರು ಸಹ ಮಂಡಿಸಿದರು.

## ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ

ಬೆಂಗಳೂರು ಫೆಬ್ರವರಿ 18 (ಕರ್ನಾಟಕ ವಾರ್ತೆ):

ವಿಧಾನಮಂಡಲದ ಉಭಯ ಸಧನಗಳ ಸದಸ್ಯರುಗಳನ್ನು ಉದ್ದೇಶಿಸಿ ಫೆಬ್ರವರಿ 17ರಂದು ರಾಜ್ಯಪಾಲರು ಮಾಇದ ಭಾಷಣಕ್ಕೆ ಇಂದು ವಿಧಾನಸಭೆಯ ಕಲಾಪದಲ್ಲಿ ಶಾಸಕ ಎ.ಎಸ್. ಪಾಟೀಲ್ (ನಡಹಳ್ಳಿ) ಅವರು ವಂದನಾರ್ಪಣಾ ಪ್ರಸ್ತಾವ ಮಂಡಿಸಿದರು.

ವಿರೋದಗಳ ನಡುವೆ ಆರಂಭವಾದ ಈ ಪ್ರಸ್ತಾವಕ್ಕೆ ಸರ್ವಪಕ್ಷಗಳು ಸಹಕಾರವನ್ನು ನೀಡಬೇಕಾಗಿ ಸಭಾಧ್ಯಕ್ಷರು ಸದಸ್ಯರಲ್ಲಿ ಮನವಿ ಮಾಡಿದರು.

# ಪತ್ರಿಕಾ ಪ್ರಕಟಣೆ

## ಅಹವಾಲು ಸ್ವೀಕೃತಿ ಮತ್ತು ಸಮಾಲೋಚನೆ ಸಭೆ

ಬೆಂಗಳೂರು ಫೆಬ್ರವರಿ 18 (ಕರ್ನಾಟಕ ವಾರ್ತೆ): ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಹೆಚ್ಚಿಸುವ ಕುರಿತು ವರದಿ ನೀಡಲು ಸರ್ಕಾರ ರಚಿಸಿರುವ ನ್ಯಾಯಮೂರ್ತಿ ಎಚ್.ಎನ್ ನಾಗಮೋಹನ ದಾಸ್ ಆಯೋಗದ ವತಿಯಿಂದ ಫೆಬ್ರವರಿ 25 ರಂದು ಬೆಂಗಳೂರು ನಗರದಲ್ಲಿ ಬೆಂಗಳೂರು ವಿಭಾಗ ಮಟ್ಟದ ಜಿಲ್ಲೆಗಳ ಅಹವಾಲು ಸ್ವೀಕೃತಿ ಮತ್ತು ಸಮಾಲೋಚನೆ ಸಭೆ ಹಮ್ಮಿಕೊಳ್ಳಲಾಗಿದೆ.

ಸಮಿತಿಯ ಅಧ್ಯಕ್ಷರಾದ ನ್ಯಾಯಮೂರ್ತಿ ಎಚ್.ಎನ್ ನಾಗಮೋಹನ ದಾಸ್‌ರವರ ನೇತೃತ್ವದ ಸಮಿತಿ ಫೆಬ್ರವರಿ 25 ರಂದು ನಗರದ ವಸಂತನಗರದಲ್ಲಿರುವ ಡಾ||ಬಿ.ಆರ್ ಅಂಬೇಡ್ಕರ್ ಭವನದ ಬೆಳಗ್ಗೆ 10.30 ಗಂಟೆಗೆ "ಬೆಂಗಳೂರು ವಿಭಾಗ"ದ ಎಲ್ಲಾ ಜಿಲ್ಲೆಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮುಖಂಡರು ಮತ್ತು ಸಂಘಟನೆಗಳಿಂದ ಅಹವಾಲು ಸ್ವೀಕೃತಿ ಮತ್ತು ಸಮಾಲೋಚನೆ ಸಭೆಯನ್ನು ಆಯೋಜಿಸಲಾಗಿರುತ್ತದೆ.

ಸದರಿ ಸಭೆಗೆ ಬೆಂಗಳೂರು ನಗರ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮುಖಂಡರು ಅಥವಾ ಸಂಘಟನೆಗಳು ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ನೀಡಬಹುದಾಗಿದೆ.

ಸಮಾಲೋಚನಾ ಸಭೆಯಲ್ಲಿ ಮೌಖಿಕವಾಗಿ ವಿಚಾರ ಅಥವಾ ಅಭಿಪ್ರಾಯಗಳನ್ನು ತಿಳಿಸಬಯಸುವವರು, ಕಾರ್ಯಕ್ರಮ ಪ್ರಾರಂಭವಾಗುವ ಒಂದು ಗಂಟೆ ಮೊದಲು ಆಡಿಟೋರಿಯಂ ಹೊರಗಡೆ, ಅದಕ್ಕಾಗಿ ತೆರೆಲಾಗುವ ಕೌಂಟರ್‌ಗಳಲ್ಲಿ ಹೆಸರುಗಳನ್ನು ನೋಂದಾಯಿಸಿಕೊಳ್ಳುವುದು, ಹೆಸರನ್ನು ನೋಂದಾಯಿಸಿಕೊಂಡವರಿಗೆ ಮಾತ್ರ ಸಮಾವೇಶದಲ್ಲಿ ತಮ್ಮ ಅಭಿಪ್ರಾಯವನ್ನು ಮೌಖಿಕವಾಗಿ ತಿಳಿಸಲು ಅವಕಾಶವಿರುತ್ತದೆ ಹಾಗೂ ವಿಷಯಕ್ಕೆ ಸಂಬಂಧಪಟ್ಟಂತೆ ಸಂಕ್ಷಿಪ್ತವಾಗಿ ಹೆಚ್ಚು ಸಮಯ ತೆಗೆದುಕೊಳ್ಳದೆ ತಮ್ಮ ಅಭಿಪ್ರಾಯ ಮಂಡಿಸಬಹುದಾಗಿದೆ ಎಂದು ಜಂಟಿ ನಿರ್ದೇಶಕರಾದ ಲಕ್ಷ್ಮಣ ರೆಡ್ಡಿ ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ನಗರ ಜಿಲ್ಲೆ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ವಿವರಗಳಿಗಾಗಿ ಜಂಟಿ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ನಗರ ಜಿಲ್ಲೆ, 4ನೇ ಮೈನ್‌ರೋಡ್ 16 ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 560 027 ಇವರ ಕಚೇರಿ 08022240449 ಸಿ.ಯು.ಜಿ. ನಂ. 94808 43019.

ಸಹಾಯಕ ನಿರ್ದೇಶಕರ ಕಚೇರಿ ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಕಚೇರಿ 0803846135, ಸಿ.ಯು.ಜಿ. 94808 43051

ಸಹಾಯಕ ನಿರ್ದೇಶಕರ ಕಚೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬನಶಂಕರಿ ಕಚೇರಿ 08026711096 ಸಿ.ಯು.ಜಿ/ 94808 43050

ಸಹಾಯಕ ನಿರ್ದೇಶಕರ ಕಚೇರಿ, ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಕಚೇರಿ 08029535045 ಸಿ.ಯು.ಜಿ 9480843049 ಹಾಗೂ ಸಹಾಯಕ ನಿರ್ದೇಶಕರ ಕಚೇರಿ, ಆನೇಕಲ್ ತಾಲ್ಲೂಕು, ಆನೇಕಲ ಕಚೇರಿ 08027859557, ಸಿ.ಯು.ಜಿ. 94808 43052.ಈ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

## ಸೆಪ್ಟಂಬರ್ 20 ರಂದು ಸಂತ ಕವಿ ಸರ್ವಜ್ಞ ಜಯಂತಿ

**ಬೆಂಗಳೂರು ಫೆ. 18 (ಕರ್ನಾಟಕ ವಾರ್ತೆ)**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಸೆಪ್ಟೆಂಬರ್ 20 ರ ಗುರುವಾರದಂದು ಬೆಳಿಗ್ಗೆ 11.30 ಗಂಟೆಗೆ ನಗರದ ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.**

**ಕಾರ್ಯಕ್ರಮ ಮೈಸೂರಿನ ಕುಂಬಾರ ಪೀಠ, ತೆಲಸಂಗಿ ಶ್ರೀ ಶ್ರೀ ಶರಣು ಕುಂಬಾರ ಗುಂಡಯ್ಯ ಸ್ವಾಮೀಜಿಯವರ ಸಾನಿಧ್ಯದಲ್ಲಿ ನಡೆಯಲಿದೆ ಉದ್ಘಾಟನೆಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನೆರವೇರಿಸಲಿದ್ದಾರೆ. ಕೇಂದ್ರದ ರಾಸಾಯನಿಕ ಮತ್ತು ಗೊಬ್ಬರ**

ಸಚಿವ ಡಿ.ವಿ. ಸದಾನಂದಗೌಡ, ಕೇಂದ್ರದ ಹಣಕಾಸು ಸಚಿವೆ ಶ್ರೀಮತಿ  ನಿರ್ಮಲಾ ಸೀತಾರಾಮನ್ ಅವರು ಉಪಸ್ಥಿತರಿರುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ್ ಬಿ ಗರುಡಾಚಾರ್ ಅವರು ವಹಿಸಲಿದ್ದಾರೆ.

ರಾಜ್ಯದ ಉಪಮುಖ್ಯಮಂತ್ರಿಗಳು, ಸಚಿವ ಸಂಪುಟ ಸದಸ್ಯರು ಸೇರಿದಂತೆ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## ಸೆಪ್ಟಂಬರ್ 21 ರಂದು
## ಕಾಯಕ ಶರಣರ ಜಯಂತಿ

ಬೆಂಗಳೂರು ಫೆ. 18 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಸೆಪ್ಟೆಂಬರ್ 21 ರ ಗುರುವಾರದಂದು ಬೆಳಿಗ್ಗೆ 11.30 ಗಂಟೆಗೆ ಕಾಯಕ ಶರಣರ ಜಯಂತಿಯನ್ನು ನಗರದ ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನೆರವೇರಿಸಲಿದ್ದಾರೆ.  ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದಗೌಡ, ಕೇಂದ್ರದ ಹಣಕಾಸು ಸಚಿವೆ ಶ್ರೀಮತಿ  ನಿರ್ಮಲಾ ಸೀತಾರಾಮನ್ ಅವರು ಉಪಸ್ಥಿತರಿರುವರು.

ರಾಜ್ಯದ ಉಪ ಮುಖ್ಯಮಂತ್ರಿಗಳು, ಸಚಿವ ಸಂಪುಟ ಸದಸ್ಯರು ಸೇರಿದಂತೆ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ್ ಬಿ ಗರುಡಾಚಾರ್ ಅವರು ವಹಿಸಲಿದ್ದಾರೆ.

**IMPOSITION OF MAXIMUM AMOUNT OF PENALTY UNDER RTI ACT FOR MALAFIDELY FURNISHING MISLEADING INFORMATION IN APPEAL NO KiC/5888/APL/2018 IN COURT HALL NO 5**

**Bengaluru Feb 18 (Karnataka Information)**

**During the course of hearing of above referred Appeal filed by Sri B.M. Godi, Badami Taluk, Bagalkot District, the Appellant alleged that Sri S.B. Kusubi, the Public Information Officer and Principal, Sri Annadaneshwara High School, Badami Taluk, Bagalkota District has furnished misleading information through irrelevant documents in response to his RTI application dated 23.012018. The information sought in the subject case was said to be related to the fabricated Marks cards and Transfer certificate issued by te Respondent school to one of their students corresponding to the years 1997-98 and 1998-99. The said appellant produced copies of certain documents in support of his**

**allegations based on which the Commission directed the jurisdictional Deputy Director, Public Instruction Department, Bagalkot District to carry out the investigation about the veracity of Information provided by the P.I.O. of the School in exercise of its power as provided under Rule 9 (iii) of Karnataka Right to Information Rules, 2005. It was established through the investigation report as well as its enclosures filed before this Commissioner by the Deputy Director that the Sri S.B. Kusubi, Respondent had furnished misleading information in response to the subject RTI application by suppressing the issue of fabricated Marks Cards and Transfer Certificate issued by him to one of the students corresponding to the year 1997-98 and 1998-99 and the concerned School management, the Public information Officer and Principal under Karnataka Civil Service Rules, 1957.**

**Sri S.B. Kusubi was served with a showcause by the Commission providing him an opportunity to furnish an explanation in his defence against the contemplated penal action under section 20(1) AND 20(2) of RTI Act, 2005 for having provided incorrect information with malafide intension and thereby violating the provisions of Section 7(1) of the Act in the subject case. Sri Kusubi, in his reply to the showcause notice admitted that he had furnished incorrect information by oversight and requested Commission not to proceed with penal action against him since the school management has already taken disciplinary action against him based on above mentioned investigation report of the Deputy Director of Public Instructions department.**

**The commission, having taken serious cognizance of the nature violation of the provisions of the Act by Sri S.B. Kusubi who malafidely provided incorrect and misleading information imposed**

**a penalty of Rs 25,000/- (Rupees Twenty Five Thousands Only), the maximum amount of penalty provided under Section 20 (1) of the act.**

## ಐ.ಬಿ.ಪಿ.ಎಸ್, ಬ್ಯಾಂಕಿಂಗ್ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿ

**ಬೆಂಗಳೂರು ಫೆ. 18 (ಕರ್ನಾಟಕ ವಾರ್ತೆ)**

**ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ 2019–20 ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ನುರಿತ ತರಬೇತಿ ಸಂಸ್ಥೆಗಳ ಮೂಲಕ ಐ.ಬಿ.ಪಿ.ಎಸ್. ಬ್ಯಾಂಕಿಂಗ್ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ.**

**ಸದರಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಆಸಕ್ತಿ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಥರ್ಥಿಗಳು ನೋಂದಣಿಗೆ ಸಂಬಂಧಿಸಿದಂತೆ ಅಗತ್ಯವಿರುವ ವಿಳಾಸ , ವಿದ್ಯಾರ್ಹತೆ ಸಂಬಂಧಿಸಿದ ದಾಖಲೆಗಳು, ಮೀಸಲಾತಿ ಪ್ರಮಾಣ ಪತ್ರ ಹಾಗೂ ಇನ್ನಿತರ ಅಗತ್ಯ ದಾಖಲೆಗಲನ್ನು ಬೆಂಗಳೂರಿನ ಕೆಂಪೇಗೌಡ ರಸ್ತೆಯ ಏಪ್ಯಾಟಿಕ್ ಕಟ್ಟಡದ 2ನೇ ಮಹಡಿಯಲ್ಲಿರುವ ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕಚೇರಿ, ಇಲ್ಲಿ ಸಲ್ಲಿಸಿ ತರಬೇತಿಗೆ ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.**

## ಸಚಿವರ ಪ್ರವಾಸ

**ಬೆಂಗಳೂರು ಫೆ. 18 (ಕರ್ನಾಟಕ ವಾರ್ತೆ)**

ವಸತಿ ಸಚಿವರು ಹಾಗೂ ಮೈಸೂರು ಮತ್ತು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರೂ ಆದ ವಿ. ಸೋಮಣ್ಣ ಅವರು ಫೆಬ್ರವರಿ 24 ರಿಂದ 26 ರವರೆಗೆ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಅದೇ ದಿನ ಕೇಂದ್ರಸ್ಥಾನಕ್ಕೆ ಹಿಂದಿರುಗಲಿದ್ದಾರೆ.

# ನೀರಿನ ಅದಾಲತ್

ಬೆಂಗಳೂರು ಫೆಬ್ರವರಿ 18 (ಕರ್ನಾಟಕ ವಾರ್ತೆ):

ಬೆಂಗಳೂರು ಜಲಮಂಡಲಿಯು ದಿನಾಂಕ:20.02.2020 ಗುರುವಾರ ದಂದು **ಸಕಾನಿಅ(ದಕ್ಷಿಣ-3), (ಪಶ್ಚಿಮ-3), (ನೈರುತ್ಯ-3), (ಕೇಂದ್ರ-3),(ಉತ್ತರ-3),(ಈಶಾನ್ಯ-2) ಮತ್ತು (ಪೂರ್ವ-3)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| **ಉಪವಿಭಾಗದ ಹೆಸರು** | **ವಿಳಾಸ** | **ದೂರವಾಣಿ ಸಂಖ್ಯೆ** |
|---|---|---|
| ದಕ್ಷಿಣ-3 | #3, 9ನೇ ಮುಖ್ಯರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು | 22945392 |
| ಪಶ್ಚಿಮ-3 | 5ನೇ ಹಂತ, 1ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು | 28611826 |
| ನೈರುತ್ಯ-3 | ಬಸವನಗುಡಿ, ಎಂ.ಎನ್.ಕೆ ಪಾರ್ಕ್, ಬೆಂಗಳೂರು | 22945155 |
| ಕೇಂದ್ರ-3 | ನೇತಾಜಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು | 22945167 |
| ಉತ್ತರ-3 | 8ನೇ ಮುಖ್ಯರಸ್ತೆ, ಡಿ ಬ್ಲಾಕ್, ಸಹಕಾರ ನಗರ, ಬೆಂಗಳೂರು | 23621888 |
| ಈಶಾನ್ಯ-2 | #55, ಕುಮಾರ ಪಾರ್ಕ್ ಪಶ್ಚಿಮ, 8ನೇ & 9ನೇ ಅಡ್ಡ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು | 22945135 |
| ಪೂರ್ವ-3 | ಬಿ-31, ಐಟಿಐ ಕಾಲೋನಿ, ದೂರವಾಣಿ ನಗರ, ಬೆಂಗಳೂರು | 25663688 |

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ ಈ ಕೆಳಕಂಡಂತಿದೆ.**

ದಕ್ಷಿಣ-3 : ಬಿ.ಟಿ.ಎಂ.ಲೇಔಟ್-1&2

ಪಶ್ಚಿಮ -3 : ಕೆಂಗೇರಿ, ಐಡಿಯಲ್ ಹೋಂ, ಬಿ.ಇ.ಎಂ.ಎಲ್. ಲೇಔಟ್, ಆರ್.ಆರ್.ನಗರ.

ನೈರುತ್ಯ-3 : ಎಂ.ಎನ್.ಕೆ.ಪಾರ್ಕ್, ಮೌಂಟ್‌ಜಾಯ್, ನಾಗೇಂದ್ರಬ್ಲಾಕ್, ಗಿರಿನಗರ, ಕತ್ರಿಗುಪ್ಪೆ

ಕೇಂದ್ರ-3 : ಫ್ರೇಜರ್ ಟೌನ್, ಮಚಲಿಬೆಟ್ಟ, ಪಿಳ್ಳಣ್ಣಗಾರ್ಡನ್, ಡಿ.ಜೆ.ಹಳ್ಳಿ

ಉತ್ತರ-3 : ಸಹಕಾರನಗರ, ಜಕ್ಕೂರು, ವಿದ್ಯಾರಣ್ಯಪುರ

ಈಶಾನ್ಯ-2 : ಕೆಂಪೇಗೌಡ ಟವರ್, ಕುಮಾರಪಾರ್ಕ್, ಜಯಮಹಲ್.

ಪೂರ್ವ-3 :ಕೆ.ಆರ್.ಪುರಂ, ಬಸವನಪುರ, ದೇವಸಂದ್ರ, ಬಿ.ನಾರಾಯಣಪುರ, ರಾಮಮೂರ್ತಿ ನಗರ,

ವಿಜಿನಾಪುರ, ಹೊರಮಾವು

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳ ಬಹುದಾಗಿದೆ.

# BWSSB: Water Adalath

Bengaluru, Feb 18 (Karnataka Information): BWSSB water Adalath is held on 20.02.2020 in AEE(South-3), AEE(West-3), AEE(South west-3), AEE(Central-3), AEE(North-3), AEE(North East-2) & AEE(East-3) sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath is held is as follows.

| Sub-division | Address | Phone Number |
|---|---|---|
| South-3 | #3, 9th Main road, BTM, 2nd stage, Bengaluru | 22945392 |

| | | |
|---|---|---|
| West-3 | 5th Stage, 1st Main, BEML Layout, RR Nagar, Bengaluru. | 28611826 |
| South West-3 | Basavanagudi, MNK Park, Bengaluru. | 22945155 |
| Central-3 | Nethaji Road, Frazer town, Bengaluru. | 22945167 |
| North-3 | 8th Main Road, 'D' Block, Sahakar Nagar, Bengaluru. | 23621888 |
| North East-2 | #55, Kumara park West, 8th & 9th cross, Central street, Bengaluru. | 22945135 |
| East-3 | B-31, ITI colony, Dooravani Nagar, Bengaluru. | 25663688 |

**The details of service stations coming under the subdivisions mentioned above are as follows:**

South -3 : BTM layout-1&2

West-3 : Kengeri, Ideal Homes, BEML Layout, RR Nagar

South west-3 : MNK park, Mountjoy, Nagendrablock, Girinagar, Kathirguppe

Central-3 : Frazer town, Machalibetta, Pillanna garden, D.J.Halli

North-3 : Sahakar Nagar, Jakkuru, Vidyaranyapura

North Eat-2 : Kempegowda tower, Kumarapark, Jayamahal

East-3 : K.R.Puram, Basavanapura, Devasandra, B.Narayanapura, Ramamurthy nagar, Vijinapura, Horamavu.

For any problems regarding the water supply and all, publics can contact 24x7 call centre: 22238888 helpline number: 1916 & whats app no: 8762228888.

Public can utilize this adalath facilities to solve the problems regarding water supply.